# ಸಾಮಾನ್ಯರನ್ನು ಕಡೆಗಣಿಸಿದ ರಾಜನಿಗೆ ಸ್ವರ್ಗಪ್ರಾಪ್ತಿ ಇಲ್ಲ

– ರವಿ ಎಂ.

**ವಿಳಾಸ:** ರವಿ ಎಂ., ಸಿದ್ದಿಪುರ, ಕೋಟೆಗಂಗೂರು ಅಂಚೆ, ಶಿವಮೊಗ್ಗ ತಾ.ಜಿ.–577204, ಮೊ: 8050358023, 8123994664,
ಮೇ: dr.ravim1502@gmail.com

ಯುದ್ಧ ಬದುಕಿನ ಅತ್ಯಂತ ಘೋರ ಸಂಗತಿ. ಇಂದಿಗೂ ಮಹಾಯುದ್ಧಗಳು ಸೃಷ್ಟಿಸಿದ ಭೀಕರ ಪರಿಣಾಮಗಳಿಗೆ ಬೆಲೆ ತೆರುತ್ತಿದ್ದೇವೆ. ಭೂಮಿಯ ಯಾವುದೇ ಭಾಗದಲ್ಲಿ ಬಾಂಬು ಸಿಡಿದರೆ ಇಡೀ ಮನುಕುಲವೆ ಬೆಚ್ಚಿಬೀಳುತ್ತದೆ. ಯುದ್ಧದಿಂದ ಒಳ್ಳೆಯದಾಗಿಲ್ಲ ಎಂಬುದು ಮನುಕುಲಕ್ಕೆ ತಿಳಿದಿದೆ. ಆದರೆ ಕೆಲವು ದೇಶಗಳ ಪ್ರಭುತ್ವಗಳು ದಿನಬೆಳಗಾದರೆ ಯುದ್ಧದ ಜಪ ಮಾಡುತ್ತಿವೆ. ಈಗಂತೂ ಮತ್ತಷ್ಟು ಹೆಚ್ಚಿದೆ. ಏಕೆಂದರೆ ದೇಶದ ಆಂತರಿಕ ಅಧಿಕಾರದ ಚುಕ್ಕಾಣಿಯನ್ನು ಹಿಡಿಯಲು ಯುದ್ಧವನ್ನು ಮಾನದಂಡದಂತೆ ಬಳಸಲಾಗುತ್ತಿದೆ. ಮತ್ತೊಂದು ಕಡೆಗೆ ಶ್ರೀಮಂತ ರಾಷ್ಟ್ರಗಳು ಯುದ್ಧಾಯುಧಗಳನ್ನು ಮಾರುತ್ತ ಲಾಭ ಮಾಡಿಕೊಳ್ಳುತ್ತಿವೆ. ಪ್ರಭುತ್ವ ಜನರ ವಿಷಯದಲ್ಲಿ ಎಷ್ಟು ನಿರ್ದಯಿಯಾಗಿರುತ್ತದೆ; ಯುದ್ಧದ ಬಗ್ಗೆ ಎಷ್ಟು ವ್ಯಾಮೋಹಿಯಾಗಬಲ್ಲದು ಎಂಬುದಕ್ಕೆ ನಮ್ಮಲ್ಲೇ ಆದ ಘಟನೆಯೊಂದನ್ನು ನೆನಪಿಸಿಕೊಳ್ಳಬಹುದು. ಆ ಘಟನೆ ಹೀಗಿದೆ: ಕೊರೊನಾದ ದಾಳಿಯಿಂದಾಗಿ ಜನರು ಅನಾರೋಗ್ಯ–ಹಸಿವಿನಿಂದ ಸಾಯುತ್ತಿದ್ದರೂ, ಪ್ರಭುತ್ವ ವಿದೇಶದಿಂದ ಕೊಂಡುತಂದ ಅತ್ಯಾಧುನಿಕ ಯುದ್ಧ ವಿಮಾನಗಳನ್ನು ಹಾರಿಸಿ, ತನ್ನ ಶಕ್ತಿಯನ್ನು ಶತ್ರುರಾಷ್ಟ್ರಗಳಿಗೆ ಪ್ರದರ್ಶಿಸಿತು! ಯಾವುವು ಜರೂರಾಗಿ ಆಗಬೇಕಾಗುತ್ತವೆಯೋ ಅವುಗಳನ್ನು ಯುದ್ಧ, ಯುದ್ಧ ಸರಕುಗಳು ಆಕ್ರಮಿಸುತ್ತವೆ. ಹಾಗಾಗಿ ಯುದ್ಧ ಯಾರಿಗಾಗಿ? ಅದರ ಉದ್ದೇಶಗಳೇನು? ಅದರ ಲಾಭವನ್ನು ಉಣ್ಣುವರಾರು? ನೋವನ್ನು ಅನುಭವಿಸುವರಾರು? ಎಂಬ ಪ್ರಾಥಮಿಕ ಪ್ರಶ್ನೆಗಳಿಗೆ ಮೇಲೆ ಉಲ್ಲೇಖಿಸಿದ ಘಟನೆ ಸಾಕಾಗಬಲ್ಲದು!

ಪ್ರಸ್ತುತ ಜಗತ್ತಿನ ಮೇಲೆ ಕೋವಿಡ್–19 ವೈರಾಣು ಯುದ್ಧ ಸಾರಿದೆ. ಮೊದಲಿನ ವೇಷದ ವೈರಾಣು ಈಗಾಗಲೇ ಲಕ್ಷಾಂತರ ಜನರನ್ನು ಕೊಂದಿದೆ. ಈಗ ರೂಪಾಂತರಗೊಂಡು ತನ್ನ ಶಸ್ತ್ರಾಸ್ತ್ರಗಳನ್ನು ಬಲಪಡಿಸಿಕೊಂಡು ಸನ್ನದ್ಧವಾಗಿದೆ. ಈ ರೂಪಾಂತರಿ ಇನ್ನೂ ಅದೆಷ್ಟು ಜನರ ಉಸಿರನ್ನು ನಿಲ್ಲಿಸುತ್ತದೆಯೋ? ದಾಳಿ ಮಾತ್ರ ಮುಂದುವರೆಯುತ್ತಲೇ ಇದೆ! ವೈರಾಣುವಿನ ಆಕ್ರಮಣವು ದೇಹಕ್ಕೆ ಸಂಬಂಧಿಸಿದ್ದಾದರೂ, ನಾಶವಾಗಿದ್ದು ಸಾಮಾನ್ಯ ಜನರ ದಿನನಿತ್ಯದ ಬದುಕು. ಇಂತಹವರ ದುಡಿಮೆಯಿಂದಲೇ ನಡೆಯುತ್ತಿದ್ದ ಆಯಾಯಾ ದೇಶದ ಆರ್ಥಿಕತೆ ದಿವಾಳಿಯಾಯಿತು. ಉತ್ಪಾದನಾ ವಲಯಗಳು ಬಾಗಿಲು ಮುಚ್ಚಿದವು. ನಿರುದ್ಯೋಗ, ಹಸಿವು, ಸಾವು, ನೋವು, ಆತಂಕಗಳು ಪ್ರತಿ ಮನೆಗೆ ಸೇರಿದವು. ಇವುಗಳೊಂದಿಗೆ ಮನುಷ್ಯರನ್ನು ಕೆಲವು ತಿಂಗಳವರೆಗೆ ಬಂಧನದಲ್ಲಿಟ್ಟಿತ್ತು. ಈ ಬಂಧನವು ಜನರಿಗಾಗಿಯೇ ಎಂಬಂತೆ ಬಿಂಬಿಸಿದ ಪ್ರಭುತ್ವ, ತಾನು ಆರಂಭದಲ್ಲಿ ಮಾಡಿದ ಎಡವಟ್ಟನ್ನು ಮುಚ್ಚಿಕೊಂಡಿತು. ಯುದ್ಧದಲ್ಲಿ ಕಾದಾಡುವುದಕ್ಕೆಂದೆ ಇರುವ ಸೈನಿಕರ ಸ್ಥಾನವನ್ನು ಡಾಕ್ಟರ್ಸ್, ನರ್ಸ್‌ಗಳು, ಸಫಾಯಿಗಳು, ಪೊಲೀಸರು ತುಂಬಿದರು. ಮುಂದೆ ನಿಧಾನಕ್ಕೆ ಕೋವಿಡನ್ನು ಗೆದ್ದರೂ, ಅದು ಸೃಷ್ಟಿಸಿರುವ ಪರಿಣಾಮಗಳಿಂದ ಬಿಡಿಸಿಕೊಳ್ಳಲು ಕೆಲವರ್ಷಗಳಂತೂ ಬೇಕಾಗುತ್ತವೆ. ಇದರ ಅರಿವಿದ್ದರು ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ, ತೆರಿಗೆಯನ್ನು ಹೆಚ್ಚಿಸಿ, ಡೀಸಲ್ ಪೆಟ್ರೋಲ್‌ಗಳ ಬೆಲೆ ಹೆಚ್ಚಿಸಿ ಹಣ ಸಂಗ್ರಹಿಸುವ ಸರ್ಕಾರದ ಧೋರಣೆಯೂ ಯುದ್ಧವೆ ಆಗುತ್ತದೆ. ಕೊರೊನಾ ಆರ್ಥಿಕತೆಯನ್ನು ನಾಶಗೊಳಿಸಿತು; ಪ್ರಭುತ್ವ ಸಾಂಕ್ರಮಿಕ ರೋಗದ ಸಂದರ್ಭದಲ್ಲಿಯೂ ನಾನಾ ರೂಪದಲ್ಲಿ ಜನರನ್ನು ಸುಲಿಯಲು ಮುಂದಾಯಿತು. ಜನವಿರೋಧಿ ಕಾಯ್ದೆಗಳನ್ನು ರೂಪಿಸಿ ಕಾರ್ಮಿಕರನ್ನು, ರೈತರನ್ನು ಸಂಕಷ್ಟದಲ್ಲಿಯೂ ಹೋರಾಟಕ್ಕಿಳಿಸಿತು. ಸದ್ಯ ರೈತರ ಹೋರಾಟ ನಡೆಯುತ್ತಲೇ ಇದೆ. ಆದರೆ ಕೇಂದ್ರ ಸರ್ಕಾರ ದೇಶದಲ್ಲಿ ಏನೂ ಆಗುತ್ತಲೇ ಇಲ್ಲವೇನೋ ಎಂಬಂತೆ ಅಥವಾ ಜನರ ಮನಸ್ಸನ್ನು ಚಂಚಲಗೊಳಿಸುವ ಉದ್ದೇಶದಿಂದ 'ಕೊವ್ಯಾಕ್ಸಿನ್' ಅಂಚುತ್ತಿದೆ. ಇವೆಲ್ಲವುಗಳ ನಡುವೆ ತಟ್ಟೆ ಜಾಗಟೆ ಬಾರಿಸಿ; ದೀಪ ಹಚ್ಚಿ ಸಂಭ್ರಮಿಸಿದ ಪತಂಗಗಳು ತೆರಿಗೆಯ ಉರಿಗೆ ಸುಟ್ಟುಕೊಂಡು ನರಳುತ್ತಿವೆ. ಇದು ವರ್ತಮಾನದ ಪ್ರಭುತ್ವವೇ ತನ್ನ ಜನರ ಮೇಲೆ ಸಾರುತ್ತಿರುವ ಯುದ್ಧವಲ್ಲವೆ?

ಜಾಗತೀಕರಣದ ಮುಂದುವರೆದ ಭಾಗವಾದ 'ಡಿಜಿಟಲ್ ವರ್ಲ್ಡ್' ವಿಶ್ವವನ್ನು ಆವರಿಸಿಕೊಂಡಿದೆ. ಹಾಗಾಗಿ ವ್ಯಕ್ತಿಯ ಖಾಸಗಿ ವಿಷಯಗಳಿಗೂ ಗೌಪ್ಯತೆ ಇಲ್ಲವಾಗಿದೆ. ಸಾಮಾಜಿಕ ಜಾಣತಾಣಗಳು 'ನಿಮ್ಮ ವೈಯಕ್ತಿಕ ಡೇಟಾ

ಬಳಸಲು ಅನುಮತಿಸಿ, ಇಲ್ಲವೆ ಹೊರನಡೆಯಿರಿ' ಎಂದು ಬೆದರಿಸುವ ಮಟ್ಟಿಗೆ ಬೆಳೆದಿವೆ. ಮತ್ತೊಂದೆಡೆ ತನ್ನ ಜನರ ಮಾಹಿತಿಗಳನ್ನು ಆಳುವ ವ್ಯವಸ್ಥೆಯೇ ಡಿಜಿಟಲೀಕರಣ ಮಾಡುತ್ತಿದೆ. ಹೀಗೆ ಮಾಡುವಂತೆ 'ಡಿಜಿಟಲ್ ವರ್ಲ್ಡ್'ನ ಪ್ರಭಾವೀ ಕೈಗಳು ಪ್ರಭಾವ ಬೀರುತ್ತವೆ. ಈ ಕೈಗಳಿಗೆ ಇದೊಂದು ಬಹುದೊಡ್ಡ ಸಂಪತ್ತಿನ ಮಾರ್ಗವಷ್ಟೆ. ತಾವು ಸಂಗ್ರಹಿಸಿದ ಮಾಹಿತಿಗಳಿಂದ ಮುಂದಿನ ದಿನಗಳಲ್ಲಿ ಒಂದು ದೇಶದಲ್ಲಿ ಅಧಿಕಾರಕ್ಕೇರುವವರು ಇವರೆಂದು ಗುರುತಿಸುತ್ತಿದ್ದಾರೆ. ಅಂತಹವರೊಂದಿಗೆ ಒಪ್ಪಂದ ಮಾಡಿಕೊಂಡು ಪಕ್ಷಗಳು ಪ್ರಚಾರ ಮಾಡುತ್ತವೆ. ಖಾಸಗಿ ವ್ಯಾಪಾರಿಗಳಿಗೆ ಲಾಭಗಳಿಕೆಯೇ ಉದ್ದೇಶವಾಗಿದ್ದಾಗ ಸುಳ್ಳನ್ನು ಮಾರಲು ಸಹಕರಿಸುತ್ತಾರೆ. ಜೊತೆಗೆ ತಮ್ಮ ವ್ಯಾಪರಕ್ಕೆ ಬೇಕಾದ ಗ್ರಾಹಕರನ್ನು ಹುಡುಕಿಕೊಂಡು ವಸ್ತುಗಳನ್ನು ಮಾರುತ್ತಾರೆ; ಉತ್ಪಾದಿಸುತ್ತಾರೆ. ಎಲ್ಲಕಿಂತ ಮುಖ್ಯವಾಗಿ ಡಿಜಿಟಲ್ ಪ್ರಪಂಚದಲ್ಲಿ ಪ್ರತಿನಿತ್ಯ 'ಸೈಬರ್ ವಾರ್'ಗಳು ಆಗುತ್ತಲೇ ಇವೆ. ಈ ವಾರ್‌ನಲ್ಲಿ ಮನುಷ್ಯನ ಬೌದ್ಧಿಕ ತಿಳಿವಳಿಕೆಯೇ ಬಹುದೊಡ್ಡ 'ವೆಪನ್'ಆಗಿ ಬಳಕೆಯಾಗುತ್ತಿದೆ. ಜನತೆಯನ್ನು ಕ್ಷಣಮಾತ್ರದಲ್ಲಿ ದಿವಾಳಿಗಳನ್ನಾಗಿ ಮಾಡಬಹುದು. ಅವರ ಸಾಮಾಜಿಕ ವಿಷಯಗಳೊಂದಿಗೆ ವೈಯಕ್ತಿಕ ಬದುಕನ್ನು ಬಲಹೀನಗೊಳಿಸಲೂಬಹುದು. ಈಗಂತೂ ದಿನಬೆಳಗಾದರೆ ಒಂದಿಲ್ಲೊಂದು ಸೈಬರ್ ವಂಚನೆಯ ವರದಿಗಳು ಇದ್ದೇ ಇರುತ್ತವೆ. ಇದೂ ಯುದ್ಧವೆ! ಹೀಗೆ ಯುದ್ಧ ಹಲವು ವೇಷಗಳನ್ನು ತೊಟ್ಟು ಜೀವಂತವಾಗಿದೆ. ನಮ್ಮನ್ನು ಪೀಡಿಸುತ್ತಿದೆ. ಯುದ್ಧ ನಡೆದಾಗ ಸಾವು ಸಂಭವಿಸಲೇ ಬೇಕೆಂಬುದಿಲ್ಲ; ಕೇವಲ ದೈಹಿಕ ಹಲ್ಲೆಗಳನ್ನೇ ಯುದ್ಧವೆಂದು ಕರೆಯಬೇಕೆಂದಿಲ್ಲ; ಜನತೆಯನ್ನು ಸಂಕಷ್ಟಕ್ಕೆ ಒಳಗು ಮಾಡುವುದು ಕೂಡ ಯುದ್ಧವೇ ಆಗುತ್ತದೆ. ಜೊತೆಗೆ ಮಾನವನ ಯೋಚನಾ ಶಕ್ತಿಯನ್ನು ಹಿಡಿದಿಟ್ಟುಕೊಂಡು, ತಮ್ಮ ವಿಚಾರಗಳನ್ನು ತಲೆಯಲ್ಲಿ ತುಂಬುವುದೂ ಯುದ್ಧವೇ. ಯುದ್ಧಗಳು ಎಲ್ಲಿ ಘಟಿಸುತ್ತವೆಯೋ ಅಲ್ಲಿಗೆ ಮಾತ್ರ ಅವುಗಳ ಪರಿಣಾಮಗಳು ಸೀಮಿತವಾಗುವುದಿಲ್ಲ. ಒಂದಲ್ಲೊಂದು ರೂಪದಲ್ಲಿ ನಮ್ಮ ಬದುಕನ್ನು ಹಿಂಡಿಹಿಪ್ಪೆ ಮಾಡುತ್ತಲೇ ಇರುತ್ತವೆ.

–2–

ಭಾರತದ ಜನತೆಯ ಬದುಕು ವಿವಿಧ ಪ್ರಭುತ್ವಗಳ ಆಳ್ವಿಕೆಗಳಿಗೆ ಒಳಗಾಗಿದೆ. ಆ ಪ್ರಭುತ್ವಗಳನ್ನು ಚಾರಿತ್ರಿಕವಾಗಿ ರಾಜಸತ್ತೆ, ವಸಾಹತುಶಾಹಿ ಆಡಳಿತ ಹಾಗೂ ವರ್ತಮಾನದ ಪ್ರಜಾಪ್ರಭುತ್ವ ಮಾದರಿಗಳಲ್ಲಿ ಗುರುತಿಸಿಕೊಳ್ಳಬಹುದು. ಈ ಪ್ರಭುತ್ವಗಳ ಆಂತರಿಕ ಸ್ವಭಾವ, ಅಧಿಕಾರದ ಮನೋಸ್ಥಿತಿ, ಅದರ ಸಂಘಟಿತ ತಿಳಿವಳಿಕೆಗಳು ಆಯಾಯಾ ಕಾಲಕ್ಕೆ ಅನುಗುಣವಾದ ಯುದ್ಧಗಳನ್ನು ಒಂದು ಸಾಮಾಜಿಕ ಅಗತ್ಯ ಎನ್ನುವಂತೆ ಬಿಂಬಿಸುತ್ತಾ ಬಂದಿವೆ. ಹಾಗೆಯೇ ಸೈನ್ಯದ ಹೆಸರಿನಲ್ಲಿ ಯುದ್ಧಗಳನ್ನು ಪೋಷಿಸುವ ಕೆಲಸಗಳನ್ನು ಮೊದನಿಂದಲೂ ಮಾಡಿವೆ ಮತ್ತು ಮಾಡುತ್ತಿವೆ. ಇಂತಹ ಸಾಮಾಜಿಕ ವಾತಾವರಣಗಳಲ್ಲಿಯೂ ಸಾಮಾನ್ಯ ಜನತೆ ಯುದ್ಧಗಳನ್ನು, ಅವುಗಳ ಅನಾಹುತಗಳನ್ನು ನೋಡುತ್ತಾ ಬದುಕನ್ನು ಕಟ್ಟಿಕೊಂಡಿದ್ದಾರೆ. ವರ್ತಮಾನದಲ್ಲಿಯೂ ಜೀವನ ಸಾಗಿಸುತ್ತಿದ್ದಾರೆ. ಯುದ್ಧಗಳು ತಮ್ಮ ಸಹಜ ಬದುಕಿನ ಮೇಲೆ, ಸಾಂಸ್ಕೃತಿಕ ಪರಂಪರೆಯ ಮೇಲೆ ಎಷ್ಟೇ ಗಾಯಗಳನ್ನು ಸೃಷ್ಟಿಸಿದರೂ ಸಹಿಸಿಕೊಂಡಿದ್ದಾರೆ. ಕೆಲವು ಬಾರಿ ಪ್ರಭುತ್ವಗಳ ಯುದ್ಧೋನ್ಮಾದದ ನಡೆಗೆ ರೋಸಿಹೋಗಿ ಅವುಗಳ ವಿರುದ್ಧ ತಿರುಗಿ ಬಿದ್ದ ಉದಾಹರಣೆಗಳೂ ಇವೆ. ಹಾಗೆಯೇ ಯುದ್ಧಗಳು ರಾಜರ, ಅವರ ಪರಿವಾರದ ಒಂದು ರಾಜಕೀಯ ನಿರ್ಧಾರವಾದಾಗ ಸಾಮಾನ್ಯ ಜನರು ಅಸಹಾಯಕರಾಗಿ ಸಾವು–ನೋವುಗಳನ್ನು ಅನುಭವಿಸಿದ್ದಾರೆ. ಒಲ್ಲದ ಮನಸ್ಥಿತಿಯಲ್ಲಿ ಅವನ್ನು ಅನಿವಾರ್ಯವೆಂದು ಒಪ್ಪಿಕೊಂಡಿದ್ದಾರೆ. ಪ್ರಭುತ್ವಗಳ ದಬ್ಬಾಳಿಕೆಗಳಿಗೆ ಕಲಾತ್ಮಕ ಅಭಿವ್ಯಕ್ತಿಗಳ ಮೂಲಕವೂ ಪ್ರತಿಕ್ರಿಯಿಸಿದ್ದಾರೆ. ಕಲಾತ್ಮಕ ಅಭಿವ್ಯಕ್ತಿಯಲ್ಲಿ ಕಾವ್ಯಗಳೂ ಸೇರಿವೆ.

ಪ್ರಾಚೀನ, ನಡುಗನ್ನಡ, ಜನಪದ ಕಾವ್ಯಗಳು ಪ್ರಭುತ್ವ, ಯುದ್ಧಗಳಿಗೆ ಸಂಬಂಧಿಸಿದ ಅಂಶಗಳಿಗೆ ಪ್ರಾಧಾನ್ಯತೆಯನ್ನು ನೀಡಿವೆ. ಪ್ರಭುತ್ವ, ಯುದ್ಧಗಳ ಆಶಯಗಳಿಗೆ ಪೂರಕವಾಗಿ ಕಾವ್ಯ ಜಗತ್ತಿನ ಜನತೆಯ ಪಾತ್ರಗಳನ್ನು ಚಿತ್ರಿಸಿವೆ. ಕಾವ್ಯಗಳ ಲೋಕದಲ್ಲಿ ಪ್ರಭುತ್ವ, ಯುದ್ಧ ಮತ್ತು ಜನತೆಗಳ ನಡುವೆ ಅಂತರ್‌ಸಂಬಂಧಗಳು ಏರ್ಪಟ್ಟಿವೆ. ಈ ಅಂತರ್‌ಸಂಬಂಧಗಳ ಹಿಂದೆ ಕಾವ್ಯಕಾಲೀನ ಸಮಾಜದಲ್ಲಿ ಪ್ರಭುತ್ವಗಳು ರೂಢಿಗತಗೊಳಿಸಿದ್ದ ಯುದ್ಧ ಪೂರಕ ಆಚರಣೆಗಳ ಪ್ರಭಾವ ಇರುವುದನ್ನು ಚಾರಿತ್ರಿಕ ದಾಖಲೆಗಳಿಂದ ಶೋಧಿಸಿಕೊಳ್ಳಬಹುದಾಗಿದೆ.

ಕನ್ನಡದ ಮೊದಲ ಅಧಿಕೃತ ಶಾಸನವಾದ ಕ್ರಿ.ಶ. 450ರ 'ಹಲ್ಮಿಡಿ ಶಾಸನ'ವು 'ಯುದ್ಧ'ದಲ್ಲಿ ಜಯ ಸಾಧಿಸಿದ ಕಲಿ ವಿಜ ಅರಸನಿಗೆ 'ಬಾಳ್ಗಟ್ಟು'ವಿನೊಡನೆ ಪಲ್ಮಿಡಿ ಮತ್ತು ಮೂವಳ್ಳಿಗಳೆಂಬ ಹಳ್ಳಿಗಳನ್ನು ದಾನ ನೀಡಲಾದ ಸಂಗತಿಯನ್ನು ತಿಳಿಸುತ್ತದೆ. ಈ ಸಂಗತಿಯ ಒಟ್ಟು ಸಾರವನ್ನು ಗ್ರಹಿಸಿದರೆ ಶಾಸನದ ಉದ್ದೇಶವು ರಕ್ಷಣಾತ್ಮಕ

ಯುದ್ಧವೊಂದನ್ನು ಪ್ರೋತ್ಸಾಹಿಸಿರುವುದನ್ನು ಕಾಣಬಹುದು. ಅಂದರೆ 'ಹಲ್ಮಿಡಿ ಶಾಸನ'ದ ಆಶಯ ಆಕ್ರಮಣಕಾರಿ ಯುದ್ಧವನ್ನು ವಿರೋಧಿಸುತ್ತದೆ ಎಂಬುದು ಗಮನಾರ್ಹ.

ಇದರ ತರುವಾಯದಲ್ಲಿ, 7ನೇ ಶತಮಾನದ ಬಾದಾಮಿಯ 'ಕಪ್ಪೆ ಅರಭಟ್ಟನ ಶಾಸನ'ವು ಪ್ರಭುತ್ವ ಹಾಗೂ ಯುದ್ಧಗಳ ಹಿನ್ನೆಲೆಯಲ್ಲಿ ಗಮನಿಸಬೇಕಾದ ಬಹುಮುಖ್ಯ ದಾಖಲೆಯಾಗಿದೆ. ಈ ಶಾಸನವು "ಸಾಧುಗೆ ಸಾಧು ಮಾಧುರ್ಯ್ಯನ್ಗೆ ಮಾಧುರ್ಯ್ಯಂ ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್ಮಾಧವನೀತನ್ಪೆಱನಲ್ಲ" (ಶಾಸನ ಸಂಗ್ರಹ, ಪುಟ-4) ಎನ್ನುವ ಮೂಲಕ ಆಕ್ರಮಣಕಾರಿ ಯುದ್ಧವನ್ನು ವಿರೋಧಿಸುತ್ತಿದೆ. ಜೊತೆಜೊತೆಗೆ ಆಕ್ರಮಣಕಾರಿ ಯುದ್ಧದಲ್ಲಿ ಹೋರಾಡಿ ಸೋತ ಕಪ್ಪೆ ಅರಭಟ್ಟನೆಂಬ ಶೂರನನ್ನು ಸ್ತುತಿಸುತ್ತಿದೆ. ಹೀಗೆ ಕನ್ನಡದ ಆರಂಭದ ಎರಡು ಶಾಸನಗಳು ರಾಜಪ್ರಭುತ್ವದ ಯುಗದಲ್ಲಿಯೂ ಆಕ್ರಮಣಕಾರಿ ಯುದ್ಧಗಳನ್ನು ವಿರೋಧಿಸುತ್ತಲೇ ಬಂದಿರುವುದು ಗಮನಾರ್ಹ ಎನಿಸುತ್ತದೆ. ಆದರೆ, 'ಹಲ್ಮಿಡಿ ಶಾಸನ'ವು ಸ್ಥಳೀಯ ದೊರೆಯೊಬ್ಬ ವಿಜ ಅರಸನಂತಹ ಜನರನ್ನು ಯುದ್ಧಕ್ಕೆ ಬಳಸಿಕೊಳ್ಳುವುದನ್ನು ತಿಳಿಸಿದರೆ, 'ಕಪ್ಪೆ ಅರಭಟ್ಟನ ಶಾಸನ'ವು ಜನರನ್ನು ಯುದ್ಧಕ್ಕೆ ಪ್ರಚೋದಿಸುವುದನ್ನು ಸೂಚಿಸುತ್ತಿದೆ. ಈ ಎರಡು ವಿಷಯಗಳು ಚರ್ಚಾರ್ಹ ಎನಿಸುತ್ತವೆ. ಏಕೆಂದರೆ ರಾಜಪ್ರಭುತ್ವವು ಯುದ್ಧಗಳಿಂದಾಗುವ ಪರಿಣಾಮಗಳ ಬಗ್ಗೆ ಹೆಚ್ಚು ಯೋಚಿಸದೆಯೇ, ನಿರ್ದಯವಾಗಿ ಯುದ್ಧಗಳನ್ನು ಮಾಡಿಸುತ್ತದೆ. ಅಂತಹ ಯುದ್ಧಗಳಿಂದ ಪ್ರಭುತ್ವ ಕಳೆದುಕೊಳ್ಳುವುದು ತುಂಬಾ ಕಡಿಮೆ. ಅದು ತನ್ನ ಸ್ವಾರ್ಥಕ್ಕೆ ಜನತೆಯನ್ನು ಬಳಸಿಕೊಳ್ಳುತ್ತದೆ. ಬಳಸಿಕೊಂಡಿದ್ದಕ್ಕೆ ಗೆದ್ದಾಗ ವಿಜ ಅರಸನಿಗೆ ಕೊಟ್ಟಂಥ ದಾನ ರೂಪಿಯಾದ ಉತ್ತೇಜನಗಳನ್ನು ನೀಡಿ ಪುರಸ್ಕರಿಸುತ್ತದೆ. ಕೆಲವು ಯುದ್ಧಗಳಲ್ಲಿ ಪ್ರಭುತ್ವ ಸೋತರೂ, ವೀರಾವೇಶದಿಂದ ಹೋರಾಡಿದ, ಮಡಿದ ಸೈನಿಕರಿಗೆ ಪ್ರಶಂಸೆಯ ರೂಪದಲ್ಲಿ ವೀರಗಲ್ಲು/ಶಾಸನಗಳನ್ನು ಕೆತ್ತಿಸುತ್ತದೆ. ಅವುಗಳ ಉದ್ದೇಶ ಪ್ರಭುತ್ವ ಸಾರುವ ಮುಂದಿನ ಯುದ್ಧಕ್ಕೆ ಸೈನಿಕಜನರನ್ನು ಸಂಗ್ರಹಿಸುವುದೇ ಆಗಿರುತ್ತದೆ. ಆದರೆ ಬಹುತೇಕ ಶಾಸನಗಳಲ್ಲಿ ಸೈನಿಕರ ಹೊರತಾಗಿ, ಜನಸಾಮಾನ್ಯರಿಗೆ ಪ್ರಾಮುಖ್ಯತೆ ನೀಡದಿರುವುದನ್ನು ಗುರುತಿಸಬಹುದು. ಆಯಾ ಕಾಲದ ಪ್ರಭುತ್ವ ಹಾಗೂ ಮತ-ಧರ್ಮಗಳು ಶಾಸನಗಳನ್ನು ತಮ್ಮ ಮುಖವಾಣಿಯನ್ನಾಗಿ ಮಾಡಿಕೊಂಡಿವೆ. ಆದ್ದರಿಂದಲೆ ಸಾಮಾನ್ಯರ ಬಗೆಗೆ ನಿರ್ಲಿಪ್ತ ಧೋರಣೆಯನ್ನು ತಾಳಿವೆ.

ಪ್ರಸ್ತುತ ಜಗತ್ತಿನ ಬಹುತೇಕ ರಾಷ್ಟ್ರಗಳು ತಮ್ಮ ಆದಾಯದ ಅರ್ಧಕ್ಕಿಂತ ಹೆಚ್ಚು ಪಾಲನ್ನು ರಕ್ಷಣೆಗೆ ಮೀಸಲಿಡುತ್ತಿವೆ. ಇಲ್ಲಿ ರಕ್ಷಣೆ ಅಂದರೆ ಸೈನ್ಯವನ್ನು ಬಲಪಡಿಸುವುದಾಗಿದೆ. ಈ ಬಲಪಡಿಸುವಿಕೆಯೇ ಪ್ರಜಾರಕ್ಷಣೆ ಎಂದು ಭಾರತದಂತಹ ರಾಷ್ಟ್ರಗಳಲ್ಲಿ ನಂಬಿಸಲಾಗುತ್ತದೆ. ಹೀಗೆ ಧರ್ಮ ರಕ್ಷಣೆ ಎಂದರೆ ಇನ್ನೊಂದು ಧರ್ಮವನ್ನು ವಿರೋಧಿಸುವುದು. ಭಿನ್ನಧರ್ಮೀಯರನ್ನು ದ್ವೇಷಿಸುವುದಾಗಿದೆ. ಧರ್ಮದ ಹೆಸರಿನಲ್ಲಿ ಮೌಢ್ಯತೆಯನ್ನು ಜೀವಂತವಾಗಿಡುವುದಾಗಿದೆ. ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಸಂಸ್ಥೆಗಳನ್ನು ಕಟ್ಟುವ ಸಂದರ್ಭದಲ್ಲಿ ಬೃಹತ್ ದೇವಾಲಯ, ಮಸೀದಿ, ಚರ್ಚುಗಳನ್ನು ನಿರ್ಮಿಸಲಾಗುತ್ತಿದೆ. ಪ್ರತಿಯೊಂದು ಧರ್ಮಕ್ಕೂ ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸುವ ಹಕ್ಕಿದೆ. ಆದರೆ ಇದೇ ಮುಖ್ಯವಾಗಬಾರದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಧರ್ಮವೇ ಪ್ರಧಾನವಾಗಿರುವ ರಾಷ್ಟ್ರಗಳಲ್ಲಿ ಪರಿಸ್ಥಿತಿ ಏನಾಗಿದೆ ಎಂಬುದನ್ನು ವಿವರಿಸಬೇಕಿಲ್ಲ. ಹಾಗಾಗಿ ರಕ್ಷಣೆ ಎನ್ನುವುದು ಮಾನವಪರ ಕಾಳಜಿಯನ್ನು ಹೊಂದಿರಬೇಕಾಗುತ್ತದೆ.

ಭಾರತದಲ್ಲಿ ರಾಜಪ್ರಭುತ್ವದೊಂದಿಗೆ ಧರ್ಮಗಳು ಸೇರಿಕೊಂಡು ಮಾಡಿದ ಯುದ್ಧಗಳ ಪರಿಣಾಮಗಳನ್ನು ಸಾಮಾಜಿಕವಾಗಿ ಇಂದಿಗೂ ಅನುಭವಿಸುತ್ತಿದ್ದೇವೆ. ಅವುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದಂತಹ ಸಾಮಾಜಿಕ ವ್ಯವಸ್ಥೆ ಜೀವಂತವಾಗಿದೆ. ಅನೂಚಾನವಾಗಿ ಈ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಭಾಷೆ, ಪುರಾಣ, ಕಾವ್ಯ-ಕಥೆ, ಕಲೆ, ಭೂಮಿ, ದೇವರು, ದೇವಾಲಯ, ಮಸೀದಿ, ಧರ್ಮ, ದೇಶಭಕ್ತಿ, ಸನಾತನ ಪರಂಪರೆ-ಸಂಸ್ಕೃತಿ, ತ್ಯಾಗ, ಶ್ರೇಷ್ಠತೆ, ಸ್ವಾಮಿನಿಷ್ಠೆ, ಸಂಘನಿಷ್ಠೆ ಎಂಬಿತ್ಯಾದಿ ಸಂಗತಿಗಳು ಅದರ ಆಯುಧಗಳಾಗಿವೆ. ಭಾವನಾತ್ಮಕವಾದ ಇಂತಹ ಆಯುಧಗಳು ಹೆಣ್ಣು, ಮಕ್ಕಳು, ತಳಜಾತಿಗಳ ಸಾಮಾನ್ಯರನ್ನು ಹಲವು ಮುಖಗಳಲ್ಲಿ ಇರಿಯುತ್ತಿವೆ. ಈ ಹತಾರಗಳಿಂದ ಮನುಷ್ಯರನ್ನು ಕೊಲ್ಲುತ್ತಿರುವುದು ಪರಂಪರೆಯನ್ನು ಉಳಿಸಿಕೊಳ್ಳುವಂತೆ ಕೂಗುವ ಭಾಷಣ ಕಲಿಗಳಲ್ಲ. ಬದಲಾಗಿ ಅವರ ಯೋಜಿತ ಕುತಂತ್ರದ ಬೆಂಕಿಗೆ ಮುಗಿಬೀಳುವ ತಳ ಸಮುದಾಯಗಳ ಯೌವನಸ್ಥ ಸೈನಿಕ ಪತಂಗಗಳು. ಈ ಪತಂಗಗಳು ತಾವು ಸುಟ್ಟುಕೊಂಡು ಸಾಯುವ ಮೊದಲು ಕೆಲವರನ್ನು ಕೊಲ್ಲುತ್ತವೆ. ಶಾಸ್ತ್ರನಿಪುಣರು ಕೊಲ್ಲಲ್ಪಟ್ಟವರನ್ನೇ ತಪ್ಪಿಸ್ಥರನ್ನಾಗಿ ಮಾಡಿ;

ಕೊಂದವರನ್ನು ಧರ್ಮರಕ್ಷರನ್ನಾಗಿಸುತ್ತಾರೆ. ಭಾಷಣ ಕಲಿಗಳು ಸರ್ಕಾರಗಳಿಂದಲೇ ತಮ್ಮ ಜಾತಿ–ಮತಗಳಿಗೊಂದು ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಿಕೊಳ್ಳುತ್ತಿದ್ದಾರೆ.

–3–

ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರ'ದ 'ಮೊಲಂ ಸಿಂಹಮಂ ಕೊಂದ ಕಥೆ'ಯು ಜನರನ್ನು ಕಾಯುವ ಸ್ಥಾನದಲ್ಲಿರುವ ನಾಯಕನೇ ಕೊಲ್ಲುವವನಾದರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಸೂಕ್ಷ್ಮವಾಗಿ ವಿವರಿಸುತ್ತದೆ. 'ಮೊಲಂ ಸಿಂಹಮಂ ಕೊಂದ ಕಥೆ' ದಟ್ಟವಾದ ಕಾಡಿನ ವರ್ಣನೆಯಿಂದ ಪ್ರಾರಂಭವಾಗುತ್ತದೆ. ಈ ಕಾಡಿನಲ್ಲಿ ವೈವಿಧ್ಯತೆ ಮತ್ತು ಬಹುತ್ವದ ಪ್ರತೀಕಗಳಾದ ತೋಳ, ಕರಡಿ, ಒಳ್ಳೆಯ ಕೊರಳಿನ ಹೊಳೆಯುವ ಹರಿಣಗಳ ಸಾಲು, ಬಿಳಿಪಟ್ಟೆಯನ್ನುಳ್ಳ ಸಾರಂಗ, ಭಯಂಕರವಾದ ಕಣೆಹಂದಿ, ಸಾರಂಗ, ಮೊಲಗಳು, ಹುಲಿ, ಕಪಿಗಳ ಗುಂಪು ಸಿಂಹ ಸಮೂಹ, ಭಯಂಕರವಾದ ನರಿಗಳ ಮಂದೆ, ಮದದಿಂದ ಕೊಡಿದ ಆನೆ, ಶಾರ್ದೂಲ, ಕಾಗೆಗಳ ಗುಂಪು, ಸರ್ಪಗಳೆಲ್ಲವೂ ಒಟ್ಟಾಗಿ ವಾಸಿಸುತ್ತಿರುವೆ. (ದು.ಕ.ಕ.ಪಂ.1.138) ಕಾಡಿನ ಬಹುತ್ವದ ವಾಸಿಗಳಿಗೆಲ್ಲಾ ರಾಜ ಸಿಂಹ. ಈ ಸಿಂಹವೋ

ದರ್ಧರ ವಿಕ್ರಮನುರುತರ
ದೋರ್ದಂಡಸಹಾಯನಿರ್ಪುದೆಂದುಮಜೇಯಂ
ನಿರ್ದಯನನುಪಮ ನಖಮುಖ
ನಿರ್ದಾರಿತವನ್ಯನಾಗಸಂಘಂ ಸಿಂಗಂ ದು.ಕ.ಕ.ಪಂ.1.139

ಇಂತಹ ಮೃಗಾಧಿರಾಜನು ಕಾಡಿನಲ್ಲಿದ್ದ ಆನೆಗಳನ್ನೆಲ್ಲ ಕೊಂದು ತಿಂದಿತ್ತು. ಹಾಗಾಗಿ ಸಿಂಹರಾಜನಿಗೆ ಆ ಬಳಿಕ ಎಲ್ಲಿಯೂ ಆಹಾರ ಸಿಕ್ಕದೆ ಇದ್ದಾಗ, ಕಾಡಿನ ಸಣ್ಣಪುಟ್ಟ ಬಡ ಪ್ರಾಣಿಗಳನ್ನೆಲ್ಲ ತಿನ್ನತೊಡಗಿತು. ರಾಜನ ವರ್ತನೆಗೆ ಬೆದರಿದ ಮೃಗಗಳೆಲ್ಲ ಒಂದಾಗಿ ತಮ್ಮ ತಮ್ಮಲ್ಲೆ ಆಲೋಚನೆ ಮಾಡಿ ಮೃಗೇಂದ್ರನಲ್ಲಿಗೆ ಬರುತ್ತವೆ. ಪ್ರಾಣಿಗಳು ಮೃಗರಾಜನಿಗೆ ನಮಸ್ಕರಿಸಿ:

ಬಿನ್ನಪವೀ ಮೃಗನಿವಹಂ
ನಿನ್ನಾಜ್ಞೆಯೊಳಿರ್ಕುಮೀ ಮಹಾಟವಿಯೊಳ್ ಶೌ
ರ್ಯೋನ್ನತ ಕಾವುದು ನೀನೆ
ಮ್ಮನ್ನಯವಿದ ಧರ್ಮಮಾರ್ಗದಿಂ ಗಜವೈರಿ ದು.ಕ.ಕ.ಪಂ.1.140

ಎಂದು ವಿನಂತಿಸಿಕೊಳ್ಳುತ್ತವೆ. ಮುಂದುವರೆದು, ದೇವಾ! ನೀವು ಇಷ್ಟರವರೆಗೆ ನಮ್ಮನ್ನು ಕಾಪಾಡಿದಿರಿ. ಈಗ ನಿಮಗೆ ಅಪಾಯ ಸಂಭವಿಸಿರಲು ನಾವು ನಿಮ್ಮ ಉಪಕಾರಕ್ಕಾಗದಿದ್ದರೆ ನಾವಿದ್ದೂ ಏನು ಪ್ರಯೋಜನ? ನಿಮಗೆ ಆನೆಗಳು ಸಿಗುವ ತನಕ ಪತಿನಿತ್ಯವೂ ನಿಮ್ಮ ಬಳಿಗೆ ಒಂದೊಂದು ಮೃಗಗಳನ್ನೂ ನಿಮ್ಮ ಆಹಾರಕ್ಕಾಗಿ ಕಳುಹಿಸುವೆವು. ಈ ವಿಚಾರ ನಿಮಗೆ ಸಮ್ಮತವೆನಿಸಿದರೆ ನಾವು ಇಲ್ಲೆ ಇರುವೆವು ; ಇಲ್ಲವಾದಲ್ಲಿ ಇಲ್ಲಿಂದ ಓಡಿಹೋಗುವೆವು (ದು.ಕ.ಕ.ಪಂ.1.140ವ) ಎಂದು ತಮ್ಮ ಅಳಲನ್ನು ತೋಡಿಕೊಳ್ಳುತ್ತವೆ.

ಇದನ್ನು ಪ್ರಜಾರಕ್ಷಣೆಯಲ್ಲಿ ಅರಸು/ನಾಯಕನ ಪಾತ್ರದ ಹಿನ್ನೆಲೆಯಲ್ಲಿ ನೋಡುವುದು ಸೂಕ್ತವೆನಿಸುತ್ತದೆ. ಏಕೆಂದರೆ ಪ್ರಜಾರಕ್ಷಣೆ ಕುರಿತ ಪ್ರಭುತ್ವದ ಧೋರಣೆ ಮತ್ತು ಪ್ರಜೆಗಳಿಗೆ ಬೇಕಾದ ಪ್ರಭುತ್ವದ ಬಗ್ಗೆ ಕಥೆ ಮಾತಾಡುತ್ತಿದೆ. ಈ ಸಂಗತಿಗಳು ಪಠ್ಯಗಳ ಕಾಲಕ್ಕೆ ಮಾತ್ರ ಸೀಮಿತವಾಗುವಂಥವಲ್ಲ, ಬದಲಾಗಿ ಕಾಲಾತೀತವಾದವುಗಳಾಗಿವೆ. ಮೇಲಿನ ಕಥೆಯ ವಿವರಗಳಲ್ಲಿ ಎಲ್ಲಾ ಪ್ರಾಣಿಗಳು ಒಂದೆಡೆ ವಾಸಿಸುತ್ತಿರುವ ಅರಣ್ಯವಿದೆ. ಆ ಅರಣ್ಯವನ್ನು ನಾವು ಸಮಾಜ ಅಥವಾ ಸಾಮ್ರಾಜ್ಯ ಅಥವಾ ದೇಶವೆಂದು ಹೆಸರಿಸಿಕೊಳ್ಳಬಹುದು. ಕಾಡನ್ನು ಆಳವವನು ಸಿಂಹರಾಜ. ದೇಶಕ್ಕೆ ಅನ್ವಯಿಸಿಕೊಂಡರೆ ರಾಜ/ಪ್ರಭು. 'ಸಿಂಹರಾಜ' ಈ ಹೆಸರಿನಲ್ಲೇ ಪ್ರಕೃತಿ ಸಹಜವಾದ 'ಬಲ' ಹಾಗೂ ಆ ಬಲದಿಂದ 'ರಾಜ/ಅಧಿಕಾರ' ಎನ್ನುವ ಪಟ್ಟ ಲಭಿಸಿರುವ ಸೂಚನೆಯಿದೆ. ಸಿಂಹ ತಿಂದೇ ಬದುಕಬೇಕು. ಅದು ಪ್ರಕೃತಿ ನಿಯಮ. ಈ ನಿಯಮವನ್ನು ಮೀರಿ ಅತಿಯಾಗಿ ಕೊಲ್ಲುವುದು ನ್ಯಾಯವೆ? ಹೀಗೆ ಬಲ ಮತ್ತು ರಾಜ/ಅಧಿಕಾರಗಳಿಂದ ಮದವೇರಿದ ಸಿಂಹ ತನ್ನ ಪ್ರಜೆಗಳ ಮೇಲೆ ಕ್ರೌರ್ಯವನ್ನು ಮಾಡುತ್ತಿರುವುದನ್ನು ಕಥೆಯೇ ಹೇಳುತ್ತಿದೆ. ಅಂದರೆ ರಾಜನಾದವನು ತನ್ನ

ಅಧಿಕಾರದಿಂದ ಸಿಂಹದಂತೆ ಪ್ರಜೆಗಳನ್ನು ಹಿಂಸಿಸುವಂಥವನಾಗಬಾರದು. ಸಿಂಹದಂತೆ ಕಾಡಿನಲ್ಲಿ ಆನೆಗಳು ಹೆಚ್ಚಿದ್ದಾಗ ಬೇಕಾಬಿಟ್ಟಿ ಕೊಂದು ತಿಂದಂತೆ, ರಾಜ ಸಿಂಹನಂತೆ ಪ್ರಜೆಗಳನ್ನು ತಿನ್ನುವುದಿಲ್ಲ. ಬದಲಾಗಿ ಆರ್ಥಿಕ ಸ್ಥಿತಿ ಉತ್ತಮವಾಗಿದ್ದಾಗ ನಾನಾ ವೇಷಗಳನ್ನು ತೊಟ್ಟು, ದೇಶವಿದೇಶಗಳನ್ನೆಲ್ಲಾ ಸುತ್ತುತ್ತಾ, ಹಿಂದಿನ ನಾಯಕರನ್ನು ತೆಗಳುತ್ತಾ ಕಾಲ ಕಳೆದು, ದೇಶವನ್ನು ದುಸ್ಥಿತಿಗೆ ತರಬಹುದು. ಅಗತ್ಯ ವಸ್ತುಗಳ ಬೆಲೆ ಏರಿಕೆ, ಅತಿಯಾದ ತೆರಿಗೆ, ಉದ್ಯೋಗಗಳನ್ನು ಸೃಷ್ಟಿಸದಿರುವುದು, ಹೊಸ ಯೋಜನೆಗಳನ್ನು ಹಾಕಿಕೊಳ್ಳದೇ ಕೇವಲ ಧರ್ಮ, ಯುದ್ಧಗಳ ಬಗ್ಗೆಯೇ ಮಾತನಾಡುತ್ತಾ ಇರುವುದು, ತನ್ನ ವೈಫಲ್ಯಗಳಿಗೆ ಬರುವ ಟೀಕೆಗಳನ್ನು ಸಹಿಸಿಕೊಳ್ಳದೇ ಪ್ರಜೆಗಳ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸುವುದು, ಮೊದಲಾದವುಗಳು ಕ್ರೌರ್ಯಗಳೇ ಆಗುತ್ತವೆ.

ಕಥೆಯಲ್ಲಿನ ಸಿಂಹ ತನ್ನ ಆಧಿಪತ್ಯದ ವ್ಯಾಪ್ತಿಯಲ್ಲಿ ಬರುವ ಪ್ರಾಣಿಗಳ ಮನವಿಯನ್ನು ತಾಳ್ಮೆಯಿಂದ ಕೇಳಿದೆ. ಸಿಂಹದಂತೆ ರಾಜನು ಬಡವರ, ಕಾರ್ಮಿಕರ, ರೈತರ ಮನವಿಯನ್ನು ಕೇಳುವವನಾಗಿದ್ದಾನೆಯೇ? ಜೊತೆಗೆ ಸಿಂಹ ತಾನು ತೆಗೆದುಕೊಂಡ ನಿರಂಕುಶ ತೀರ್ಮಾನವನ್ನು ಪ್ರಾಣಿಗಳೆಂಬ ಪ್ರಜೆಗಳ ಒತ್ತಾಯದ ಮೇರೆಗೆ ಬದಲಾಯಿಸಿಕೊಂಡಿದೆ. ಪ್ರಜೆಗಳ ಸಲಹೆಯನ್ನು ಮನ್ನಿಸಿದೆ. ಆದರೆ ರಾಜ ಕಾಯ್ದೆ ಕಾನೂನುಗಳನ್ನು ಮಾಡುವಾಗ, ಖಾಸಗೀಕರಣ, ಸರ್ಕಾರಿ ಸಂಸ್ಥೆಗಳ ಮಾರಾಟ ಇತ್ಯಾದಿಗಳ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳುವಾಗ ಜನರ ಸಲಹೆಗಳನ್ನು ಕೇಳುತ್ತಾನೆಯೆ? ಹಾಗೆಯೇ ಜನವಿರೋಧಿ, ರೈತವಿರೋಧಿ ಕಾಯ್ದೆಗಳನ್ನು, ದೇಶದ ಭಾವೈಕ್ಯತೆ, ಭ್ರಾತೃತ್ವಗಳಿಗೆ, ಸಂವಿಧಾನದ ಆಶಯಗಳಿಗೆ ಧಕ್ಕೆ ತರುವಂತಹ ಪ್ರಭುತ್ವದ ನಡೆಗಳನ್ನು ವಿರೋಧಿಸುವಾಗ ಅಥವಾ ಇವುಗಳ ಬಗೆಗೆ ಸಲಹೆ ಸೂಚನೆಗಳನ್ನು ನೀಡುವ ಪ್ರಜೆಗಳ ಧ್ವನಿಗೆ ಕಿವಿಕೊಡುವುದೆ? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳುವ ಸಾಧ್ಯತೆಯನ್ನು ಪಂಚತಂತ್ರದ ಕಥೆಯ ಭಾಗವೇ ಉಂಟುಮಾಡುತ್ತದೆ.

ಕಾಯುವ ಸ್ಥಾನದಲ್ಲಿರುವ ರಾಜ ಹೇಗೆ ಪ್ರಜೆಗಳನ್ನು ಪಾಲಿಸಬೇಕೆಂಬ ಸೂಕ್ಷ್ಮತೆಯನ್ನು ಕಥೆ ಪ್ರಾಣಿಗಳ ಮೂಲಕ ನಿರೂಪಿಸುತ್ತಿದೆ. ಧರ್ಮಮಾರ್ಗದಲ್ಲಿ ನಡೆಯುತ್ತಾ, ಪ್ರಜೆಗಳನ್ನು ಕಾಯುವಂತಹ ಅರಸನಿಗೆ ಪ್ರಜೆಗಳು ತಮ್ಮ ಜೀವವನ್ನೇ ಅರ್ಪಿಸಿಕೊಳ್ಳುವುದಕ್ಕೂ ಹೆದರಲಾರರು ಎಂಬುದನ್ನು ಕಥೆಯ ಪ್ರಾಣಿಗಳೇ ಹೇಳುತ್ತಿವೆ. ನಮ್ಮ ದೇಶದಲ್ಲಿ ತಮ್ಮ ನೆಚ್ಚಿನ ನಾಯಕ ಮರಣ ಹೊಂದಿದಾಗ ಅನುಯಾಯಿಗಳು, ಅಭಿಮಾನಿಗಳು ತಮ್ಮ ಜೀವವನ್ನು ತ್ಯಾಗ ಮಾಡಿದ ಉದಾಹರಣೆಗಳು ಬೇಕಾದಷ್ಟಿವೆ. ಅಧಿಕಾರ ನಡೆಸುವವನು ವಿಪರೀತ ತೆರಿಗೆಯನ್ನು ಹಾಕುವುದರ ಮೂಲಕವೇ ಸಂಪತ್ತನ್ನು ಸೃಷ್ಟಿಸಿಕೊಳ್ಳಬಾರದು. ಜನರು ಬದುಕುವುದಕ್ಕೆಂದೆ ಬಳಸುವ ದುಡಿಮೆಯ ಹಣದ ಮೇಲೆ ಪ್ರಭುತ್ವದ ಕಣ್ಣಿರಬಾರದು. ಅದೇನಿದ್ದರೂ ನೆಮ್ಮದಿಯಾಗಿ ಜೀವನ ಸಾಗಿಸಿ, ಉಳಿತಾಯ ಮಾಡುವಂತಹ ಹಣದ ಮೇಲೆ ತೆರಿಗೆಯನ್ನು ವಿಧಿಸುವಂತಿರಬೇಕು. ಹೀಗೆ ರಾಜನು ತನ್ನ ಪ್ರಜೆಗಳನ್ನು ಪಾಲನೆ ಪೋಷಣೆ ಮಾಡುತ್ತಾ, ನಿಧಾನವಾಗಿ ತೆರಿಗೆಯನ್ನು ಸಂಗ್ರಹಿಸಿಕೊಂಡು ಧರ್ಮಮಾರ್ಗದಲ್ಲಿ ಆಡಳಿತ ಮಾಡಬೇಕು. ಅಧಿಕಾರವನ್ನು ಹಿಡಿಯಲು ಮಾತ್ರ ಧರ್ಮವನ್ನು ಬಳಸುವಂತಾಗಬಾರದೆಂಬುದು ಕಥೆಯ ಅಂತರ್‌ಧ್ವನಿಯಾಗಿದೆ. ಒಂದು ವೇಳೆ ಸಿಂಹದಂತೆ ತನ್ನ ಪ್ರಜೆಗಳನ್ನು ಸಂಕಷ್ಟಕ್ಕೆ ಈಡುಮಾಡುತ್ತಾ ಇದ್ದರೆ ಪ್ರಾಣಿಗಳು ಇಲ್ಲಿಂದ ಓಡಿ ಹೋಗಬೇಕಾಗುತ್ತದೆಂದು ಹೇಳಿದಂತೆ, ಜನರು ಹಸಿವಿನಿಂದ, ಕಾಯಿಲೆಗಳಿಂದ ಸಾಯಬೇಕಾದ ಪರಿಸ್ಥಿತಿ ಉದ್ಭವಾಗುತ್ತದೆ. ಇಲ್ಲವೆಂದರೆ ಮೊಲ ಸಿಂಹನನ್ನು ಕೊಂದಂತೆ; ಪ್ರಜೆಗಳು ಚಾಣಾಕ್ಷತೆಯಿಂದ ಪ್ರತಿಭಟಿಸಿ ಅಧಿಕಾರದಿಂದ ಕೆಳಗಿಳಿಸುತ್ತಾರೆ. ಇಲ್ಲವೆಂದರೆ ಚುನಾವಣೆಯಲ್ಲಿ ಸೋಲಿಸುತ್ತಾರೆ. ತಮಗೆ ಪೂರಕವಾದ ಆಡಳಿತವನ್ನು ಸ್ಥಾಪಿಸಿಕೊಳ್ಳುತ್ತಾರೆ. ಕಾಯುವವರೇ ಕೊಲ್ಲುವವರಾದರೆ ಸಾಯಬೇಕು ಇಲ್ಲ; ಸೋಲಬೇಕು. ಇದನ್ನು ಪ್ರಭುತ್ವ ಅರ್ಥಮಾಡಿಕೊಳ್ಳಬೇಕು ಎನ್ನುವುದನ್ನು ಪ್ರಾಚೀನ ಸಾಹಿತ್ಯ ಪಠ್ಯಗಳು ಧ್ವನಿಸಿವೆ.

ಮಿತ್ರಕಾರ್ಯ ಪ್ರಕರಣದ 'ಕಾಗೆಯುಂ ಆಮೆಯುಂ ಸಾರಂಗಮುಂ ಇಲಿಯುಂ' ಕಥೆಯಲ್ಲಿ ಚಿತ್ರಗೀವ ಎಂಬ ಪಾರಿವಾಳ ರಾಜನು ತನ್ನ ಪರಿವಾರದೊಂದಿಗೆ ಬೇಡನ ಬಲೆಯಲ್ಲಿ ಸೆರೆಸಿಕ್ಕುತ್ತಾನೆ. ಆಗ ತನ್ನ ಮಿತ್ರ ಹಿರಣ್ಯರೋಮನೆಂಬ ಇಲಿಯ ಸಹಾಯದಿಂದ ಬಿಡಿಸಿ– ಕೊಳ್ಳುವಾಗ

ಪರಿಜನ ಜನಪದಭೃತಿ ಧ
ರ್ಮರಕ್ಷಣಂ ಸ್ವಪ್ರಯತ್ನಮೆಂಬಿದನಾತ್ಮಂ
ಭರಿಯಾಗಿ ಬಿಸುಟ ನರಪತಿ

ಪರಿಹೃತ ಧರ್ಮಾರ್ಥಕಾಮ ಮೋಕ್ಷನೆಯಕ್ಕುಂ ದು.ಕ.ಕ.ಪಂ.5.422

'ಪರಿಜನರನ್ನೂ, ಜನಪದರನ್ನೂ ಕಾಪಾಡುವ ಧರ್ಮರಕ್ಷಣೆ, ಸ್ವಯಂಪ್ರಯತ್ನಗಳನ್ನು ಸ್ವೇಚೆಯಿಂದ ಬಿಡುವ ಅರಸನು ಧರ್ಮಾರ್ಥ ಕಾಮಮೋಕ್ಷಗಳಿಂದ ದೂರನಾಗುತ್ತಾನೆ' ಎನ್ನುತ್ತಾನೆ. ಇದು ಉತ್ತಮ ರಾಜನ ಗುಣವೆಂಬುದನ್ನು ಪತ್ಯ ಹಿರಣ್ಯರೋಮನಿಂದ ಸಮರ್ಥಿಸುತ್ತದೆ. ಇಂದಿನ ನಾಯಕರು ಜನರ ಮತಗಳಿಂದ ಗೆದ್ದು, ತಮ್ಮ ಪರಿಜನಕ್ಕಾಗಿ ತಲೆಮಾರುಗಳೇ ಕೂತು ತಿಂದರೂ ಕರಗದಷ್ಟು ಆಸ್ತಿಯನ್ನು ಮಾಡುವುದನ್ನು ಟೀಕಿಸುತ್ತದೆ. ಹಾಗೆಯೇ ಜನರನ್ನು ಕಷ್ಟದಲ್ಲಿಟ್ಟು ತಾವುಗಳು ಸಾವಿರಾರು ಕೋಟಿ ರೂಪಾಯಿಗಳ ವಿಮಾನಗಳಲ್ಲಿ ವಿದೇಶಗಳನ್ನು ಸುತ್ತುತ್ತಾರೆ. ತಮ್ಮ ಪರಿಜನರ ಭ್ರಷ್ಟಚಾರಗಳನ್ನು ಬಯಲಿಗೆಳೆಯುವ 'ಮಾಧ್ಯಮ'ಗಳ ವಿರುದ್ಧ ಸಮರ ಸಾರಲು ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಪಂಚತಂತ್ರ ಪರಿಜನದ ರಕ್ಷಣೆಯಂತೆ, ಪ್ರಜಾರಕ್ಷಣೆಗೂ ಮಹತ್ವಕೊಡುತ್ತದೆ. ಪಂಚತಂತ್ರದ ಇಂತಹ ಹಲವು ಕಥೆಗಳು ಪ್ರಭುತ್ವ ಹೇಗಿರಬೇಕು, ಹೇಗಿರಬಾರದು ಮತ್ತು ಪ್ರಜೆಗಳ ರಕ್ಷಣೆಯ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕು, ಪ್ರಜೆಗಳು ಎಂತಹ ರಾಜನನ್ನು ತ್ಯಜಿಸಬೇಕು ಎಂಬ ಮೊದಲಾದ ಪ್ರಜಾಪರ ನಿಲುವುಗಳನ್ನು ಇಂದಿಗೂ ಪ್ರಸ್ತುತವಾಗುವಂತೆ ದಾಖಲಿಸಿದೆ.

–3–

ಜನಪದ ಮಹಾಭಾರತವು ರಾಜಸತ್ತೆಯು ಜನಮುಖಿಯಾಗಿ ಇರಬೇಕೆಂಬ ಆಶಯಗಳನ್ನು ವ್ಯಕ್ತಪಡಿಸಿದೆ. ಅವುಗಳ ಮೂಲಕ ರಾಜಧರ್ಮವು ಜನತೆಯನ್ನು ಪೊರೆಯುವುದರಲ್ಲಿಯೇ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳಬೇಕೆಂಬ ನಿಲುವನ್ನು ಮಂಡಿಸಿವೆ. ಈ ರೀತಿಯ ರಾಜಧರ್ಮವು ಪ್ರಭುತ್ವ ಹಾಗೂ ಜನತೆ ಎರಡನ್ನೂ ಒಟ್ಟಿಗೆ ಸರಿದೂಗಿಸುವಂತಹ ನೀತಿಪಾಠಗಳಾಗಿವೆ.

ಧರ್ಮರಾಜನು ಇಂದ್ರಪ್ರಸ್ಥದಲ್ಲಿ ಓಲಗದಲ್ಲಿದ್ದಾಗ ನಾರದ ಏಕಾಏಕಿ ಅಲ್ಲಿಗೆ ಆಗಮಿಸುತ್ತಾನೆ. ರಾಜ ಆತನಿಗೆ ರಾಜ್ಯೋಚಿತ ಆತಿಥ್ಯಗಳಿಂದ ಸತ್ಕರಿಸುತ್ತಾನೆ. ಆಗಮನದ ಉದ್ದೇಶವನ್ನು ವಿಚಾರಿಸುತ್ತಾನೆ. ಆಗ ನಾರದ ಇಂದ್ರನ ಆಸ್ಥಾನದಲ್ಲಿ ಪಾಂಡುರಾಜನು ಅನುಭವಿಸುತ್ತಿರುವ ಕಷ್ಟಗಳನ್ನು ವಿವರಿಸುತ್ತಾನೆ. ಪಾಂಡುವಿಗೆ ಸ್ವರ್ಗ ಲಭಿಸುವುದಕ್ಕಾಗಿ ರಾಜಸೂಯ ಯಾಗವನ್ನು ಮಾಡಲು ಸಲಹೆ ನೀಡುತ್ತಾನೆ. ಈ ಸಂಗತಿಗಳು ಪಂಪ ಹಾಗೂ ಕುಮಾರವ್ಯಾಸ ಭಾರತದಲ್ಲಿ ಕಂಡುಬರುತ್ತವೆ. ಆದರೆ ಜನಪದ ಮಹಾಭಾರತದ ನಾರದ ಜನಮುಖಿಯಾಗಿ ಆಲೋಚಿಸುವಂತಹ ಸಲಹೆಯನ್ನು ಧರ್ಮರಾಜನಿಗೆ ಒದಗಿಸುತ್ತಾನೆ. ಇಂತಹ ಸಲಹೆಗಳಲ್ಲಿಯೇ ಕನ್ನಡ ಮಹಾಭಾರತಗಳು ಯಾವ ಅಂಶಗಳಿಗೆ ಮಾನ್ಯತೆ ನೀಡಿವೆ ಎನ್ನುವುದನ್ನು ತಿಳಿಯಬಹುದು.

ಧರ್ಮರಾಯ ತನ್ನ ತಂದೆ ಪಾಂಡುರಾಜನಿಗೆ ಏಕೆ ಸ್ವರ್ಗ ಪ್ರಾಪ್ತಿಯಾಗಿಲ್ಲ ಎಂದು ನಾರದನನ್ನು ಪ್ರಶ್ನಿಸುತ್ತಾನೆ. ಅದಕ್ಕೆ ನಾದರನು "ಐವರು ಮಕ್ಕಳು ಗ್ಯಾನಿಸಿ ಕೇಳಿರಪ್ಪ ನಿಮ್ಮ ತಂದೆ ಪಾಂಡುರಾಜ ಯಗ್ನೆ ಯಾಗ ಮಾಡ್ನಿಲ್ಲ ಕೆರೆಕಟ್ಟೆ ಬಾವಿಗಳನು ಅಶ್ವತ್ಥ ಕಟ್ಟೆಯನು ಕಟ್ಟಿಸಿದ ಜನುವಲ್ಲ ಅನ್ನಛತ್ರ ಧರ್ಮಛತ್ರ ಯಾವುದನ್ನು ಕಟ್ಟಿಸಲಿಲ್ಲ ಇಂಥ– ಪುಣ್ಯವಾದ ಕೆಲಸಗಳ ನಿಮ್ಮ ತಂದೆ ಮಾಡನಿಲ್ಲ" (ಜನಪದ ಮಹಾಭಾರತ, 65.113–124) ಎಂದು ಉತ್ತರಿಸುತ್ತಾರೆ.

ಜನಪದ ಭಾರತವು ಸಾಮಾನ್ಯ ಜನತೆಯ ಪರವಾಗಿರುವಂತಹ ರಾಜನನ್ನು ಬಯಸಿದೆ. ಜನರಿಗಾಗಿ ದುಡಿಯದ ಪ್ರಭುತ್ವವನ್ನು ಪರೋಕ್ಷವಾಗಿ ಟೀಕಿಸುವಂತೆ, ಜನಹಿತ ಕಾರ್ಯಗಳನ್ನು ಮಾಡದಿರುವ ರಾಜನಿಗೆ ಸ್ವರ್ಗಕ್ಕೆ ಪ್ರವೇಶವಿಲ್ಲ ಎಂಬ ನಿಲುವನ್ನು ಪ್ರತಿಪಾದಿಸಿದೆ. ಈ ನಿಲುವನ್ನು ನಂಬಲು ಅಸಾಧ್ಯವೆನಿಸಿದರೂ, ಅದರ ಆಶಯವನ್ನು ಒಪ್ಪಿಕೊಳ್ಳಲೇ ಬೇಕು. "ಜನಸಾಮಾನ್ಯರನ್ನು ಕಾವ್ಯ ಪರಿಸರದಲ್ಲಿ–ನಿಜಪರಿಸರದಲ್ಲೆಂತೂ ಅಂತೆಯೇ ಕಡೆಗಣಿಸಿರುವ ಶಿಷ್ಟ ಪರಿಸರಕ್ಕೆ ಜನಪದ ಪ್ರತಿಭೆ ಪ್ರತಿಕ್ರಿಯಿಸಿರುವ ಈ ಬಗೆ ವಿಶೇಷ ಗಮನಾರ್ಹ. ಜನಸಾಮಾನ್ಯರ ಸಂತಸ–ನೆಮ್ಮದಿಗಳಲ್ಲಿ ಆಳುವವರ ಏಳ್ಗೆ ಇದೆ. ಈ ದೆಸೆಯಲ್ಲಿ ಶ್ರಮಿಸದ ದೊರೆಗಳನ್ನು, ರಾಜಕಾರಣಿಗಳನ್ನು ಇತಿಹಾಸ ಕ್ಷಮಿಸುವುದಿಲ್ಲ ಎಂಬ ನಿಲುವು ಇಲ್ಲಿದೆ. ಈ ಸಂಗತಿ ಪ್ರತಿಪಾದನೆಗೆ ಜನಪದರು ಕಟ್ಟಿರುವ ಕಥಾವರಣ ಅವರ ಸೃಜನಶೀಲತೆಗೆ, ಸ್ವೋಪಜ್ಞತೆಗೆ ನಿದರ್ಶನವಾಗಿದೆ." (ರಾಜಶೇಖರ ಪಿ.ಕೆ., ಪ್ರಾಸ್ತಾವಿಕ, ತಲ್ವಾಡಿ ಬಿ.ಎಸ್. (ಸಂ), ಜನಪದ ಮಹಾಭಾರತ ವಿಚಾರ ಸಂಕಿರಣ, ಪುಟ–17) ಜನಪದರು ಯಾವಾಗಲೂ ಸಾಮಾನ್ಯರ ನಿರೀಕ್ಷೆಗಳೊಂದಿಗೆ, ತಳಹಂತದ ಸಾಮುದಾಯಿಕತ್ವದ ಹಿತವನ್ನು ಬಯಸುವಂಥವರೆಂಬುದು ತಿಳಿಯುತ್ತದೆ. ಹಾಗೆಯೇ ವರ್ತಮಾನದಲ್ಲಿ ಜನಪ್ರತಿನಿಧಿಗಳು ಇಂತಹ ಕಾರ್ಯಗಳನ್ನು

ಮಾಡದೆ, ದೇವಾಲಯ, ಮಠಮಾನ್ಯಗಳಿಗೆ ಹಿರಿದಾದ ಕಾಣಿಕೆಗಳನ್ನು ನೀಡುವವರಿಗೆ ಮಾರ್ಗದರ್ಶಕವಾದ ಮಾತುಗಳೆಂದರೂ ತಪ್ಪಾಗುವುದಿಲ್ಲ.

ಆದ್ದರಿಂದಲೇ ಜನಪದ ಭಾರತವು ಕಾವ್ಯದ ಕೊನೆಯಲ್ಲಿ "ಪಾಂಡವರು ಆಳುವಾಗ ಪ್ರಜೆಗಳು ಸುಕದಲ್ಲಿ ಬಾಳುವೆ ನಡುಸವುರೆ ಮಳೆ ಬೆಳೆ ಎಲ್ಲವು ಕಾಲಕಾಲಕೆ ಬಂದು ತ್ರುಪ್ತೀಯ ತಂದೀದೆ ಅಂಥಾ ಕಾಲದಲ್ಲಿ ದ್ರುತರಾಷ್ತ್ರ ಗಾಂಧಾರಿ ಕೊಂತಮ್ಮ ವಿದುರ ಸೆಂಜೆಯ್ಯರ ಮನಸೀಗೆ ಸಂತೋಸ ಆಗೋ ಹಂಗೆ ಧರ್ಮಸತ್ರಗಳ ಧರ್ಮರು ಕಟ್ಟೀಸಿ ನಿಚ್ಚ ಅನ್ನದಾನ ಮಾಡೀಸಿ ಪ್ರಜೆಗಳ ಸಂತೋಸ ಪಡ್ಸಿದರು ಮನೆಮಠ ಇಲ್ಲುದೋರ್‍ಗೆ ಮನೆಮಠ ಕಟ್ಟಿಸಿ ನೇರ್ಪುಗಳ ಮಾಡಿದರು ಪ್ರಯಾಣಿಕರೀಗಂತ ಅರವಟ್ಟಿಗೆಗಳ ಕಟ್ಟಿ ನೀರು ಮಜ್ಜಿಗೆ ದಾನ ಮಾಡ್ಸಿದರು ಧರ್ಮರು" (ಜನಪದ ಮಹಾಭಾರತ, 153.13–36) ಎನ್ನುತ್ತದೆ. ತಂದೆ ಮಾಡದ ಜನಮುಖಿ ಕಾರ್ಯಗಳನ್ನು ರಾಜನಾದ ಮಗ ಮಾಡಿದನು ಎಂಬುದನ್ನು ಮರೆಯದೇ ದಾಖಲಿಸುತ್ತದೆ. "ಪಾಂಡುರಾಜ ಆಳ್ವಿಕೆ ನಡೆಸುತ್ತಿದ್ದಾಗ 'ಜನೋಪಕಾರಿ ಕೆಲಸಗಳನ್ನು ಮಾಡದಿದ್ದುದರಿಂದ ಆತನಿಗೆ ಸ್ವರ್ಗಪ್ರಾಪ್ತಿಯಾಗಿರಲಿಲ್ಲ' ಎನ್ನುತ್ತದೆ ಕಾವ್ಯ. ರಾಜಪ್ರಭುತ್ವದ ಆವರಣದಲ್ಲಿ ಹುಟ್ಟಿಕೊಂಡ ಕಾವ್ಯವೊಂದನ್ನು ಜನಪದ ಕವಿ ಅಪ್ರಜ್ಞಾಪೂರ್ವಕವಾಗಿ ಪ್ರಜಾಪ್ರಭುತ್ವದ ಆವರಣದಲ್ಲಿ ಪುನರ್‌ಸೃಷ್ಟಿಸುತ್ತಿರುವಂತೆ ಕಂಡುಬರುತ್ತದೆ." (ಮೈಸೂರು ಕೃಷ್ಣಮೂರ್ತಿ, ಜನಪದ ಮಹಾಭಾರತ : ಶೋಷಣೆ ವಿರೋಧಿ ನೆಲೆಗಳು, ಜನಪದ ಮಹಾಭಾರತ ವಿಚಾರ ಸಂಕಿರಣ, ಪುಟ–52) ಹಾಗಾಗಿಯೇ ಪಾಂಡವರು ಜನೋಪಕಾರಿ ಕಾರ್ಯಗಳನ್ನು ಮಾಡುವಂತಹ ಪರಿಪ್ರೇಕ್ಷ್ಯೆಯನ್ನು ಕಾವ್ಯವು ನಿರ್ಮಿಸುತ್ತದೆ. ಪಂಪ ಭಾರತದಲ್ಲಿಯೂ ಪಾಂಡವರು ಕಾಲೂರ್ಗಳ, ಅಗ್ರಹಾರಗಳ ಜನರಿಗೆ ಧನಸಹಾಯ ಮಾಡುವುದು ಇದೇ ನಿಲುವನ್ನು ಪ್ರತಿಪಾದಿಸುತ್ತದೆ.

ಅರಸು ರಾಕ್ಷಸ ಮಂತ್ರಿಯೆಂಬುವ/ ಮೊರೆವ ಹುಲಿ ಪರಿವಾರ ಹದ್ದಿನ
ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು
ಉರಿವುರಿವುತಿದೆ ದೇಶ ನಾವಿ/ ನ್ನಿರಲು ಬಾರದೆನುತ್ತ ಜನ ಬೇ
ಸರಿನ ಬೇಗೆಯಲಿರದಲೇ ಭೂಪಾಲ ಕೇಳೆಂದ ಕ.ಭಾ.ಸ.1.62

ಎಂದು ನಾರದರು ಸೂಕ್ಷ್ಮವಾಗಿ ಯುಧಿಷ್ಠಿರನಿಗೆ ರಾಜಧರ್ಮವನ್ನು ಬೋಧಿಸುವಂತಹ ಈ ಮಾತುಗಳಲ್ಲಿ ಸಾಮಾನ್ಯ ಪ್ರಜೆಗಳ ಪರವಾದ ಧ್ವನಿಯಿದೆ. ಹಾಗೆಯೇ ರಾಜ, ಮಂತ್ರಿ, ಆಡಳಿತದ ಪರಿವಾರ ಇವುಗಳು ಕ್ರೂರಿಯಾಗಿರಬಾರದೆಂಬ ನಿಲುವನ್ನು ವ್ಯಕ್ತಪಡಿಸುತ್ತವೆ. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಅರಸು ದುಷ್ಟರಾಜನಾಗಿ, ಶೋಷಕನಾಗಿರುವ ಬದಲು ಬಡವರ ಬಿನ್ನಪವನ್ನು ಕೇಳುವ 'ಭೂಪಾಲ'ಕನಾಗಿರಬೇಕೆಂಬುದು! ಈ ಮಾತುಗಳು ಏಕಕಾಲಕ್ಕೆ 'ಧರ್ಮರಾಜನಿಗೆ ನಿನ್ನ ಆಡಳಿತಾಂಗವನ್ನು ಒಮ್ಮೆ ಅವಲೋಕಿಸು' ಎಂಬ ಸಲಹೆಯನ್ನೂ ನೀಡುವಂತಿವೆ. ಆದರೆ ಇಂತಹ ಬಿಡಿಬಿಡಿ ಪದ್ಯಗಳಿಂದ 'ಕುಮಾರವ್ಯಾಸ ಭಾರತ'ವು ಸಾಮಾನ್ಯ ಜನತೆಯ ಪರವಾಗಿದೆ ಅನ್ನಲು ಸಾಧ್ಯವಾಗುವುದಿಲ್ಲ. ಏಕೆಂದರೆ, ಇದೇ ಸನ್ನಿವೇಶದಲ್ಲಿ ನಾರದ ಆಡುವ ಬಹುತೇಕ ಮಾತುಗಳು ದ್ವಿಜವರ್ಗದ ಹಿತಾಸಕ್ತಿಯನ್ನೇ ಬಯಸುತ್ತವೆ. ಮುಂದುವರೆದು ನಾರದ, ಕೃಷಿ, ಕೃಷಿಕರ ಬಗ್ಗೆ ಮಾತಾಡುತ್ತಾನೆ.

ಕೃಷಿ ಮೊದಲು ಸರ್ವಕ್ಕೆ ಕೃಷಿಯಿಂ/ ಪಸರಿಸುವುದಾ ಕೃಷಿಯನುದ್ಯೋ
ಗಿಸುವ ಜನವನು ಪಾಲಿಸುವುದಾ ಜನಪದದ ಜನದಿ
ವಸು ತೆರಳುವುದು ವಸುವಿನಿಂ ಸಾ/ ಧಿಸುವಡಾವುದಸಾಧ್ಯವದರಿಂ
ಕೃಷಿವಿಹೀನನ ದೇಶವದು ದುರ್ದೇಶ ಕೇಳೆಂದ ಕ.ಭಾ.ಸ.1.64

ಎನ್ನುವ ಮಾತನ್ನು ಇಂದಿನ ಪ್ರಭುತ್ವವು ಅರ್ಥಮಾಡಿಕೊಳ್ಳಬೇಕಿದೆ. ಜನಪದ ಮಹಾಭಾರತದಲ್ಲಿ "ರೈತ ಪ್ರತಿನಿಧಿಯೋ ಎಂಬಂತೆ ಬಲರಾಮ ಹೋದಲ್ಲಿ ಬಂದಲ್ಲಿ ತನ್ನ ನೇಗಿಲನ್ನು ಹೊತ್ತು ತಿರುಗುತ್ತಾನೆ; ಕುಬೇರನು ಸೆಗಣಿ ತೊಪ್ಪೆಯಲ್ಲಿದ್ದ ಧಾನ್ಯಗಳನ್ನು ಜಾಲಿಸಿ ಒಪ್ಪಮಾಡಿ ಸಂಗ್ರಹಿಸಿ ಕೊಳ್ಳುತ್ತಾನೆ. ಗಜಗೌರಿ ವ್ರತದ ಸಚಿದರ್ಭದಲ್ಲಿ ಕುಬೇರನು ಕಳುಹಿಸಿದ್ದ ಬೀಜಗಳನ್ನು, ಉದ್ದು, ಹೆಸರು, ಅವರೆ ಇತ್ಯಾದಿ, ತನ್ನ ಜೀವಮಾನ ಪೂರ್ತಿ ಸಚಿರಕ್ಷಿಸಿಕೊಂಡು ಬಂದಿದ್ದಾಳೆ ಕುಂತಿ; ಸಹದೇವ–ನಕುಲರು ಪ್ರಾಣಿ–ಪಕ್ಷಿ ಸಂಕುಲದ ಸಂರಕ್ಷಕರಾಗಿದ್ದಾರೆ. ಈ ಮುಂತಾದ ಪ್ರತೀಕ–ಪ್ರತಿಮೆ–ರೂಪಕ–ಸಂಕೇತಗಳಲ್ಲದೆ ಇಡೀ ಕೃತಿ ಕನ್ನಡ ಜನಪದರಾದ ಕೃಷಿಕರ ಕಣ್‌ಬೆಳಕಿನಲ್ಲಿಯೇ ಹಾದುಬರುತ್ತದೆ." (ಶಿವರಾಮಯ್ಯ,

ಜನಪದ ಮಹಾಭಾರತದ ಪ್ರಸ್ತುತತೆ, ಜನಪದ ಮಹಾಭಾರತ ವಿಚಾರ ಸಂಕಿರಣ, ಪುಟ–39) ಈ ಮಾತುಗಳು ಭಾರತ ಕತೆಯಲ್ಲಿನ ಪ್ರಮುಖ ಪಾತ್ರಗಳ ಮೂಲಕ ಕೃಷಿ ಬದುಕಿಗೆ ಕೊಟ್ಟಂತಹ ಆದ್ಯತೆಯನ್ನು ವಿವರಿಸುತ್ತವೆ. ಕುಮಾರವ್ಯಾಸ ಭಾರತವು ರಾಜಪ್ರಭುತ್ವಕ್ಕೆ 'ಕೃಷಿಯನುದ್ಯೋಗಿಸುವ ಜನವನು ಪಾಲಿಸುವುದು' ಎಂದು ಹೇಳುತ್ತದೆ. ಆದರೆ ಜನಪದ ಕಾವ್ಯವು ರಾಜಪಾತ್ರಗಳಿಂದಲೇ ಅದನ್ನು ಮಾಡಿಸಿರುವುದು ಗಮನಾರ್ಹ. ಹೀಗೆ ಕಾವ್ಯಗಳು ಸಾಮಾನ್ಯ ಜನತೆಯ, ಅದರಲ್ಲೂ ಅನಕ್ಷರಸ್ಥರ ಉದ್ಯೋಗವೆಚಿದು ಭಾವಿಸುವ ಕೃಷಿಯ, ರೈತಾಪಿಗಳ ಮೂಲಕ ಪ್ರಭುತ್ವ ಏನುಬೇಕಾದರೂ ಸಾಧಿಸಬಹುದು ಎನ್ನುವ ಮಾತುಗಳು ವರ್ತಮಾನಕ್ಕೂ ಸಲ್ಲುತ್ತವೆ.

ಪ್ರಭುತ್ವವು ಯುದ್ಧ ಮತ್ತು ಧರ್ಮದ ಬಗ್ಗೆ ಹೆಚ್ಚಾಗಿ ಮಾತಾಡುತ್ತಿರುವಾಗ ಜನರ ಬಗ್ಗೆ ಯೋಚಿಸುವುದಿಲ್ಲ. ಜನರು ಸಾಯುತ್ತಿರಲಿ ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತದೆ. ಗತಕಾಲದ ಸಂಗತಿಗಳನ್ನು ಜಗಿಯುತ್ತ ಎಂಜಲನ್ನು ಸಿಡಿಸುತ್ತಲೇ ಇರುತ್ತದೆ. ಇಂತಹ ಪ್ರಭುತ್ವವನ್ನು ಬೆಂಬಲಿಸುವವರು ಅದರ ತಪ್ಪನ್ನು ಒಪ್ಪಿಕೊಳ್ಳುತ್ತಾರೆ. ಅಂದರೆ ನಿಶಕ್ತ ಜನರ ಮೇಲೆ ಪ್ರಭುತ್ವ ಮಾಡುವ ಯುದ್ಧವನ್ನು ಇವರು ಸಮರ್ಥಿಸುತ್ತಾರೆ. ಹಾಗಾಗಿ ನಿರುದ್ಯೋಗ, ಬಡತನ, ಹಸಿವು, ರೋಗ, ಹಣದುಬ್ಬರ, ಸ್ವಾತಂತ್ರ್ಯದ ಹರಣ, ಭ್ರಷ್ಟಾಚಾರ, ಸ್ತ್ರೀ ಶೋಷಣೆಗಳು ಮುಖ್ಯವೆನಿಸುವುದಿಲ್ಲ. ಪ್ರಭುತ್ವವೂ ಇವುಗಳ ಕುರಿತು ತುಟಿ ಬಿಚ್ಚುವುದಿಲ್ಲ. ಅತ್ಯಂತ ಅನಿವಾರ್ಯವೆಂಬಂತೆ ಮಂದಿರ–ಪ್ರತಿಮೆಗಳ ನಿರ್ಮಾಣ, ಸುಸಜ್ಜಿತವಾಗಿರುವ ಸಂಸತ್ತಿನಲ್ಲಿ ಚರ್ಚೆಗೆ ಆಸ್ಪದವೇ ನೀಡದೆ, ಅಧಿವೇಶಗಳನ್ನು ಮುಂದೂಡುತ್ತಿರುವ ಸರ್ಕಾರ ಹೊಸ ಸಂಸತ್ತಿಗೆ ಅಡಿಗಲ್ಲು ಹಾಕುತ್ತದೆ, ಯುದ್ಧ ಸರಕುಗಳ ಕೊಳ್ಳುವ ಒಪ್ಪಂದಗಳು, ಖಾಸಗೀಕರಣ, ಸರ್ಕಾರ ಉರುಳಿಸಿ ವಾಮಮಾರ್ಗದ ಮೂಲಕ ಅಧಿಕಾರ ಹಿಡಿಯುವಂತಹ ಕೆಲಸಗಳಲ್ಲಿ ಮಗ್ನವಾಗಿರುತ್ತದೆ. ಇಂತಹ ವಾಸ್ತವ ಸತ್ಯವನ್ನು ತಿರುಚಿ ಜನರಿಗೆ ಮಾಹಿತಿಯನ್ನು ಒದಗಿಸುವ ಜಾಲವನ್ನು ಸಾಕಿಕೊಂಡಿರುತ್ತದೆ. ಈ ಜಾಲವು ಪ್ರಭುತ್ವದ ಎಲ್ಲ ಕ್ರಿಯೆಗಳನ್ನೂ ಚಾರಿತ್ರಿಕ ಸಂಗತಿಗಳೊಂದಿಗೆ ಸಂಬಂಧ ಕಲ್ಪಿಸಿ, ನಿಜದ ಚರಿತ್ರೆಯನ್ನು ತಿದ್ದಿ ವಿವರಿಸುತ್ತದೆ. ಅದನ್ನು ಒಪ್ಪಿಸುವ ಮೂಲಕ ಪ್ರಭುತ್ವದ ನೀಚತನಗಳನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ. ಪ್ರಭುತ್ವದ ಬಗ್ಗೆ ಜನರು ಮಾತಾಡದಂತೆ ಒಂದಿಲ್ಲೊಂದು ಗುಲ್ಲನ್ನು ಹಬ್ಬಿಸಿ, ಜನರ ಚಿಂತನೆಯ ಮಾರ್ಗವನ್ನೇ ಬದಲಾಯಿಸುತ್ತದೆ. ಸರ್ವಾಧಿಕಾರ ಹೀಗೆ ಬೇರುಬಿಡುತ್ತದೆ!

**ಆಕರ ಸೂಚಿ**


1. ಅಣ್ಣಿಗೇರಿ ಎ.ಎಂ., ಶೇಷಶಾಸ್ತ್ರಿ ಆರ್. (ಸಂ), ಆ.ವ. 2007, ಶಾಸನ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಗುಂಡ್ಮಿ ಚಂದ್ರಶೇಖರ ಐತಾಳ್ (ಗದ್ಯಾನುವಾದ), 2018, ದುರ್ಗಸಿಂಹ ಕವಿಯ ಕರ್ಣಾಟಕ ಪಂಚತಂತ್ರಂ, ಕನ್ನಡ ಸಾಹಿತ್ಯ ಪರಿಷತ್ತು. ಪಂಪಮಾಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು
3. ತಲ್ವಾಡಿ ಬಿ.ಎಸ್., ಮೈಸೂರು ಕೃಷ್ಣಮೂರ್ತಿ, ಚಿಕ್ಕಮಳಲಿ ಆರ್ ಮಹದೇವ (ಸಂ), 2011, ಜನಪದ ಮಹಾಭಾರತ ವಿಚಾರ ಸಂಕಿರಣ, ರೋಹಿಣಿ ಎಂಟರ್ ಪ್ರೈಸಸ್, ಬೆಂಗಳೂರು,
4. ಪ್ರಸನ್ನ ಎ.ವಿ. (ಸಂ), 2001, ಕನ್ನಡ ಭಾರತ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ರಾಜಶೇಖರ ಪಿ.ಕೆ. (ಸಂ), 2011, ಜನಪದ ಮಹಾಭಾರತ, ಎಂ. ನಾಗರಾಜಮೂರ್ತಿ, ಮನೆ ನಂ. 132, ಮೂರನೇ ಮಾದರಿ ಅಧಿಕಾರಿಗಳ ನಿವಾಸ, ಮೆಡಿಕಲ್ ಸೆಂಟರ್ ಹತ್ತಿರ ಬಿಇಎಂಎಲ್ ನಗರ, ಕೆಜಿಎಫ್.